**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.** 2422/2025

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಈರೇಶ್ | ಸಿ.ಡಬ್ಲ್ಯೂ-45 |
| ತಂದೆಯ ಹೆಸರು | : | ಲಿಂಗಪ್ಪ | ಪಿ.ಡಬ್ಲ್ಯೂ-07 |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಪಿ ಎಸ್ ಐ | |
| ವಾಸಸ್ಥಳ | : | ಚಳ್ಳಕೆರೆ | ದಿಃ 18-02-2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 17.06.2025 ರಿಂದ ಇಲ್ಲಿಯವರೆಗೆ ನಾನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ . ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 17.06.2025 ರಂದು ಚಾಸಾ-44 ರವರಿಂದ ಈ ಪ್ರಕರಣದ ಕಡತವನ್ನು ಹೆಚ್ಚಿನ ತನಿಖೆಗಾಗಿ ಪಡೆದುಕೊಂಡಿರುತ್ತೇನೆ.

ದಿನಾಂಕ 04.10.2025 ರಂದು ಚಾಸಾ-40 ಹಾಗೂ ಚಾಸಾ-41 ರವರನ್ನು ಕಳ್ಳತನ ಪ್ರಕರಣದಲ್ಲಿ ಆರೋಪಿ ಮತ್ತು ಮಾಲು ಪತ್ತೆಗಾಗಿ ಗಸ್ತು ಕರ್ತವ್ಯಕ್ಕೆ ನೇಮಿಸಿದ್ದು, ಸದರಿಯವರು ಅದೇ ದಿನ ಒಬ್ಬ ಆಸಾಮಿಯನ್ನು ಕೆಎ-16 ಇಕೆ-7690 ಮೋಟಾರ್ ಬೈಕ್ ನೊಂದಿಗೆ ಠಾಣೆಯಲ್ಲಿ ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ಸದರಿ ಆಸಾಮಿಯನ್ನು ವಿಚಾರ ಮಾಡಲಾಗಿ ಮಹಮ್ಮದ್ ಷರೀಫ್ ತಂದೆ ಪಿರನ್ ಸಾಬ್, ಆಜಾದ್ ನಗರ , ಹಿರಿಯೂರು ಪಟ್ಟಣ ಎಂದು ತಿಳಿಸಿರುತ್ತಾರೆ.

ಅದೇ ದಿನ ದಿನಾಂಕ 05.10.2025 ರಂದು ಬೆಳಿಗ್ಗೆ 09-00 ಗಂಟೆಗೆ ನನ್ನ ಮುಂದೆ ಹಾಜರಾಗಲು ಬಿ ಎನ್ ಎಸ್ ಎಸ್ ಕಲಂಃ 35(3) ರಡಿಯಲ್ಲಿ ನೋಟೀಸ್ ಅನ್ನು ಜಾರಿ ಮಾಡಿರುತ್ತೇನೆ. ದಿನಾಂಕ 05.10.2025 ರಂದು ಆರೋಪಿಯು ಠಾಣೆಗೆ ಹಾಜರಾಗದೇ ಇದ್ದಾಗ ಚಾಸಾ-40 ಮತ್ತು 41 ರವರನ್ನು ಆರೋಪಿ ಪತ್ತೆಗಾಗಿ ನೇಮಕ ಮಾಡಿರುತ್ತೇನೆ. ಚಾಸಾ-40 ಮತ್ತು 41 ರವರು ಅದೇ ದಿನ ಬೆಳಿಗ್ಗೆ 11-30 ಗಂಟೆಗೆ ಆರೋಪಿಯನ್ನು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ಆರೋಪಿಯನ್ನು ವಿಚಾರ ಮಾಡಲಾಗಿ ಕೆಎ-16 ಇಕೆ-7690 ಮೋಟಾರ್ ಬೈಕ್ ಠಾಣಾ ಮೊಕದ್ದಮೆ ಸಂಖ್ಯೆ 377/2025 ಮೊಕದ್ದಮೆಗೆ ಸಂಬಂಧಿಸಿದ್ದರಿಂದ ಆರೋಪಿಯ ವಿರುದ್ಧ

ದಸ್ತಗಿರಿ ಕ್ರಮ ಅನುಸರಿಸಿ ಅದೇ ದಿನ ಮದ್ಯಾಹ್ನ 01-45 ರಿಂದ 02-15 ರವರೆಗೆ ಸದರಿ ಮೋಟಾರ್ ಬೈಕನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮೋಟಾರ್ ಬೈಕನ್ನು ಮಾಲು ಪಟ್ಟಿ ಸಂಖ್ಯೆ 258/2025 ರಂತೆ ಅಳವಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿಪಿ.7 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 7(ಸಿ) ಅಂತ ಗುರುತಿಸಲಾಯಿತು.

ಅದೇ ದಿನ ಆರೋಪಿಯು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿದ ಮೇರೆಗೆ ಚಳ್ಳಕೆರೆ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಮದ್ಯಾಹ್ನ 02-30 ರಿಂದ 03-00 ಗಂಟೆಯವರೆಗೆ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ.

ನಂತರ ಇತರೆ ಮೂರು ಪ್ರಕರಣಗಳಲ್ಲಿ ಆರೋಪಿಯು ತೋರಿಸಿದ ಸ್ಥಳಗಳಲ್ಲಿ ಪಂಚನಾಮ ಕ್ರಮ ಜರುಗಿಸಿರುತ್ತೇನೆ.

ಅದೇ ದಿನ ಚಾಸಾ-40 ಮತ್ತು 41 ರವರ ಬೆಂಗಾವಲಿನಲ್ಲಿ ಆರೋಪಿಯನ್ನು ನ್ಯಾಯಾಲಯದಲಿ ಹಾಜರು ಪಡಿಸಿರುತ್ತೇನೆ.

ದಿನಾಂಕ 06.10.2025 ರಂದು ಆರೋಪಿಯನ್ನು ಪೊಲೀಸರ ಕಸ್ಟಡಿಗೆ ಪಡೆದು ಚಾಸಾ-6 ರಿಂದ 12 ರವರು ಹಾಜರು ಪಡಿಸಿದ ಬೈಕ್ ಗಳನ್ನು ಚಾಸಾ-4 ಮತ್ತು 5 ಹಾಗೂ ಆರೋಪಿಯ ಸಮಕ್ಷಮ ಬೈಕ್ ಗಳನ್ನು ಪಂಚನಾಮೆ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-6 ರಿಂದ 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿನಾಂಕ 05.10.2025 ರಂದು ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ಆರೋಪಿಯು ಒಟ್ಟು 34 ಬೈಕ್ ಗಳನ್ನು ಒಪ್ಪಿಕೊಂಡಿರುತ್ತಾನೆ. ಸ್ವ-ಇಚ್ಛಾ ಹೇಳಿಕೆಯಲ್ಲಿ ವಾಹನವನ್ನು ನೀಡಿದ ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ಹೇಳಿರುತ್ತಾನೆ. ಆರೋಪಿಯು ಸ್ವ- ಇಚ್ಛಾ ಹೇಳಿಕೆಯನ್ನು ಕಳ್ಳತನ ಮಾಡಿದ ಸ್ಥಳಗಳನ್ನು ತೋರಿಸುವುದಾಗಿ ಹೇಳಿರುತ್ತಾನೆ.

ಸಾಕ್ಷಿಗೆ ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿಃ9 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 9(ಎ) ಅಂತ ಗುರುತಿಸಲಾಯಿತು.

ಸ್ವ- ಇಚ್ಛಾ ಹೇಳಿಕೆಯ ಆಧಾರದ ಮೇಲೆ ಚಾಸಾ-6 ರಿಂದ 12 ರವರಿಗೆ ಅವರ ವಶದಲ್ಲಿದ್ದ ವಾಹನಗಳನ್ನು ಹಾಜರು ಪಡಿಸಲು ನೋಟೀಸ್ ಅನ್ನು ನೀಡಿರುತ್ತೇನೆ.

ದಿನಾಂಕ 07.10.2025 ರಂದು ಚಾಸಾ-13 ರಿಂದ 30 ರವರಿಗೆ ಸ್ವ- ಇಚ್ಛಾ ಹೇಳಿಕೆಯಲ್ಲಿ ತಿಳಿಸಿದಂತೆ ಸದರಿಯವರಿಗೆ ತಮ್ಮ ವಶದಲ್ಲಿದ್ದ ವಾಹನಗಳನ್ನು ಹಾಜರು ಪಡಿಸಲು ನೋಟೀಸ್ ಅನ್ನು ನೀಡಿರುತ್ತೇನೆ. ಅದೇ ದಿನ ಚಾಸಾ-13 ರಿಂದ 30 ರವರು ಠಾಣೆಗೆ ಬೈಕ್ ಗಳನ್ನು ತಂದು ಹಾಜರು ಪಡಿಸಿದ ಬೈಕ್ ಗಳನ್ನು ಚಾಸಾ-4 ಮತ್ತು 5 ಹಾಗೂ ಆರೋಪಿಯ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಬೈಕ್ ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ.

ದಿನಾಂಕ 08.10.2025 ರಂದು ಚಾಸಾ-34 ರಿಂದ 36 ರವರಿಗೆ ಆರೋಪಿಯು ಸ್ವ- ಇಚ್ಛಾ ಹೇಳಿಕೆಯಲ್ಲಿ ತಿಳಿಸಿದಂತೆ ಸದರಿಯವರಿಗೆ ತಮ್ಮ ವಶದಲ್ಲಿದ್ದ ವಾಹನಗಳನ್ನು ಹಾಜರು ಪಡಿಸಲು ನೋಟೀಸ್ ಅನ್ನು ನೀಡಿರುತ್ತೇನೆ. ಅದೇ ದಿನ ಚಾಸಾ-31 ರಿಂದ 36 ರವರು ಠಾಣೆಗೆ ಬೈಕ್ ಗಳನ್ನು ತಂದು ಹಾಜರು ಪಡಿಸಿದ ಬೈಕ್ ಗಳನ್ನು ಚಾಸಾ-4 ಮತ್ತು 5 ಹಾಗೂ ಆರೋಪಿಯ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಬೈಕ್ ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ.

ಚಾಸಾ-39 ರವರು ನಾನು ನೀಡಿದ ಉಕ್ತಲೇಖನದಂತೆ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದ್ದು , ಚಾಸಾ-42 ರವರು ಮಹಜರ್ ಸಮಯದಲ್ಲಿ ಭಾವಚಿತ್ರವನ್ನು ತೆಗೆದಿರುತ್ತಾರೆ.

ದಿನಾಂಕ 14.11.2025 ರಂದು ಚಾಸಾ-37 ಮತ್ತು 38 ರವರ ಸಮಕ್ಷಮದಲ್ಲಿ ಚಾಸಾ-1 ರವರಿಂದ ಇಂಡಿಮಿನಿಟಿ ಬಾಂಡ್ ಪಡೆದು ಕಎ-16 ಇಕೆ-7690 ವಾಹನವನ್ನು ಚಾಸಾ-1 ರವರ ವಶಕ್ಕೆ ನೀಡಿ ವಾಹನ ಬಿಡುಗಡೆ ಪಂಚನಾಮೆ ಜರುಗಿಸಿರುತ್ತೇನೆ.

ಸಾಕ್ಷಿಗೆ ನಿಪಿ.4 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 4(ಬಿ) ಅಂತ ಗುರುತಿಸಲಾಯಿತು.

ವಾಹನ ಬಿಡುಗಡೆ ಪಂಚನಾಮೆ ಸಮಯದಲ್ಲಿ ಚಾಸಾ-42 ರವರು ನಿಪಿ.5 ಮತ್ತು 6 ರ ಭಾವಚಿತ್ರವನ್ನು ತೆಗೆದಿರುತ್ತಾರೆ. ಭಾವಚಿತ್ರಕ್ಕೆ ಸಂಬಂಧಿಸಿದದಂತೆ ಚಾಸಾ-42 ರವರಿಂದ ಸಾಕ್ಷಿ ಅಧಿನಿಯಮದಂತೆ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ.

ಸಾಕ್ಷಿಗೆ ಪ್ರಮಾಣ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪ್ರಮಾಣ ಪತ್ರವನ್ನು ನಿಪಿಃ10 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 10(ಎ) ಅಂತ ಗುರುತಿಸಲಾಯಿತು. ಸಿಡಿಯನ್ನು ನಿಪಿ.11 ಅಂತ ಗುರುತಿಸಲಾಯಿತು.

ದಿನಾಂಕ 04.12.2025 ರಂದು ಆರೋಪಿಯ ವಿರುದ್ಧ ಅಪರಾಧ ದೃಢಪಟ್ಟ ಮೇರೆಗೆ ಘನ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಟಿ.ಎಸ್.ಎಂ., ಆರೋಪಿ ಪರ ವಕೀಲರಿಂದಃ**

ಚಾಸಾ-39 ರಿಂದ 44 ರವರು ನನ್ನ ಅಧೀನದಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಕಾನೂನು ರೀತ್ಯ ನಾನು ಹೇಳಿದ ಕೆಲಸಗಳನ್ನು ನಿರ್ವಹಿಸುತ್ತಾರೆ. ಚಾಸಾ-4 ಮತ್ತು 5 ರವರ ಆಧಾರ್ ಕಾರ್ಡ್ ಗಳನ್ನು ದೋಷರೋಪಣ ಪಟ್ಟಿಯಲ್ಲಿ ಸಲ್ಲಿಸಿರುವುದಿಲ್ಲ. ಚಾಸಾ-4 ಮತ್ತು 5 ರವರು ಹೇಳಿದ ಮಾಹಿತಿಯ ಮೇರೆಗೆ ಸದರಿಯವರ ಹೆಸರು ವಿಳಾಸ ಗೊತ್ತಾಗಿರುತ್ತದೆ. ಸಿಬ್ಬಂದಿಗಳ ಸಹಾಯದಿಂದ ಚಾಸಾ-4 ಮತ್ತು 5 ರವರನ್ನು ಪಂಚರಾಗಿ ಬರ ಮಾಡಿಕೊಂಡಿರುತ್ತೇನೆ. ಚಾಸಾ-4 ಮತ್ತು 5 ರವರು ನೆಹರೂ ಸರ್ಕಲ್ ಬಳಿ ಇದ್ದರು. ಪಂಚರಿಗೆ ಪ್ರಕರಣದ ಬಗ್ಗೆ ಮಾಹಿತಿ ತಿಳಿಸಿರುತ್ತೇನೆ. ನಿಪಿ.7 ರಲ್ಲಿ ಏನು ಬರೆದಿದೆ ಎಂದು ಚಾಸಾ-4 ಮತ್ತು 5 ರವರಿಗೆ ತಿಳಿಸದೇ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ತೋರಿಸಿದ ಕೃತ್ಯ ನಡೆದ ಪಂಚನಾಮೆಯನ್ನು ನಾನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಜರುಗಿಸದ ಕಾರಣ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ಕಳ್ಳತನ ಮಾಡಿರುತ್ತಾರೆ ಎಂದು ಹೇಳಲಾದ 34 ಬೈಕ್ ಗಳನ್ನು ಜಪ್ತು ಪಡಿಸಿಕೊಂಡಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ-40 ಮತ್ತು 41 ರವರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

ಚಾಸಾ-1 ರವರು ಕೆಎ-16 ಇಕೆ 7690 ವಾಹನವನ್ನು ಸ್ವತಃ ಹಾಜರು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರ ಬೈಕ್ ಕಳ್ಳತನವಾಗಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಬೈಕ್ ಎರಡು ದಿನಗಳ ನಂತರ ಅವರಿಗೆ ಸಿಕ್ಕಿದ್ದು, ಸದರಿ ವಿಚಾವನ್ನು ತಿಳಿಸಲು ಬಂದಾಗ ಸದರಿ ಕಳ್ಳತನವನ್ನು ಆರೋಪಿಯ ಮೇಲೆ ಹೊರಿಸಿರುತ್ತೇನೆ ಎಂದರೆ ಸರಿಯಲ್ಲ. ಇತರೆ ಪ್ರಕರಣಗಳಲ್ಲಿ

ಮಹಜರ್ ಕ್ರಮ ಜರುಗಿಸಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಯಲಾಗಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ವಾಹನಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿಬೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ